## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 652(566)
ಮಾನ್ಯ ಸದಸ್ಯರ ಹೆಸರು: ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ಸಚಿವರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು
ಉತ್ತರಿಸಬೇಕಾದ ದಿನಾಂಕ: 22.07.2024.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಒಟ್ಟು ಸರ್ಕಾರಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಮಾಡಿಕೊಂಡಿರುವ ಸಂಖ್ಯೆ ಎಷ್ಟು; | ರಾಜ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಇದುವರೆಗೂ ಒಟ್ಟು 22853 ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರನ್ನು (6 ರಿಂದ 8ನೇ ತರಗತಿ) ನೇಮಕ ಮಾಡಿಕೊಳ್ಳಲಾಗಿರುತ್ತದೆ. |
| ಆ) | ಸದರಿ ನೇಮಕಾತಿಯಲ್ಲಿ ವಿವಾಹಿತ ಮಹಿಳೆ ಗಂಡ/ತಂದೆ ಇವರಲ್ಲಿ ಯಾರ ಆದಾಯವನ್ನು ಪರಿಗಣಿಸಲಾಗಿದೆ; | ದಿನಾಂಕ:08/03/2023 ರಂದು ಪ್ರಕಟಿಸಲಾದ ಅಂತಿಮ ಆಯ್ಕೆ ಪಟ್ಟಿಯಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಏಕಸದಸ್ಯ ಪೀಠದ ದಿನಾಂಕ: 30-01-2023ರ ಆದೇಶದಂತೆ (ರಿಟ್ ಅರ್ಜಿ. ಸಂಖ್ಯೆ:23752/2022) ವಿವಾಹಿತ ಮಹಿಳಾ ಅಭ್ಯರ್ಥಿಗಳ ತಂದೆ ಅಥವಾ ಗಂಡ ಇಬ್ಬರಲ್ಲಿ ಯಾರದೇ ಆದಾಯ ಪ್ರಮಾಣ ಪತ್ರ ಸಲ್ಲಿಸಿದ್ದರೂ ಒಟ್ಟಾರೆಯಾಗಿ ಪರಿಗಣಿಸಿ ಮೆರಿಟ್ ಆಧಾರದಲ್ಲಿ ಆಯ್ಕೆ ಮಾಡಲಾಗಿತ್ತು. ಈ ಆದೇಶದ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಸಲ್ಲಿಕೆಯಾಗಿ ಸದರಿ ಮೇಲ್ಮನವಿಯಲ್ಲಿ (ರಿಟ್ ಅಫೀಲು ಸಂಖ್ಯೆ:305/2023) ದಿನಾಂಕ: 12/10/2023 ರಂದು ನೀಡಲಾದ ತೀರ್ಪಿನಂತೆ ತಂದೆ ಅಥವಾ ಗಂಡನ ಆದಾಯ ಪ್ರಮಾಣ ಪತ್ರ ಸಲ್ಲಿಸಿ ಮೀಸಲಾತಿ ವರ್ಗದಲ್ಲಿ ದಿನಾಂಕ: 08/03/2023ರ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದವರ ಹಾಗೂ ದಿನಾಂಕ: 18/11/2022ರ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿದ್ದು, ದಿನಾಂಕ: 08/03/2023ರ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗದ ಅಭ್ಯರ್ಥಿಗಳಿಗಾಗಿ, ಪ್ರಕರಣ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿರುವುದರಿಂದ, 481 ಹುದ್ದೆಗಳನ್ನು ಭರ್ತಿಮಾಡದೇ ಕಾಯ್ದಿರಿಸಿ ಉಳಿದವರನ್ನು ನೇಮಕಾತಿಗೆ ನಿಯಮಾನುಸಾರ ಪರಿಗಣಿಸಲಾಗಿದೆ. ಪ್ರಕರಣವು ಪ್ರಸ್ತುತ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿಯಿರುತ್ತದೆ. |
| ಇ) | ಒಂದು ವೇಳೆ ಮಹಿಳಾ ಅಭ್ಯರ್ಥಿ ವಿಚ್ಛೇದಿತಳಾಗಿದ್ದು, ತಂದೆ-ತಾಯಿ ಮನೆಯಲ್ಲಿ ವಾಸವಾಗಿಲ್ಲದೆ ಪ್ರತ್ಯೇಕವಾಗಿದ್ದಲ್ಲಿ ಹಾಗೂ ತನ್ನ ಸ್ವಂತ ದುಡಿಮೆಯ ಆದಾಯ ಪ್ರಮಾಣ ಸಲ್ಲಿಸಿದ್ದಲ್ಲಿ, ಇದನ್ನು ಪತಿ/ತಂದೆ/ಸ್ವಂತ ಆದಾಯ ಇವುಗಳಲ್ಲಿ ಯಾವ ಆದಾಯವನ್ನು ಪರಿಗಣಿಸಲಾಗುವುದು; | |
| ಈ) | ಕೋಲಾರ ಜಿಲ್ಲೆಯ GPSTR ಅಭ್ಯರ್ಥಿಯಾದ ವಿಚ್ಛೇದಿತ ಮಹಿಳೆಯೊಬ್ಬರು ಅವರ ದಿವಂಗತ ತಂದೆ ಹೆಸರಿನಲ್ಲಿ ಜಾತಿ ಆದಾಯ ಪ್ರಮಾಣ ಪತ್ರ ನೀಡಿದ್ದರೂ ವಿವಾಹಿತ ಮಹಿಳೆ ತಂದೆ ಆದಾಯ ಎಂದು ಪರಿಗಣಿಸಿ ಕೌನ್ಸಿಲಿಂಗ್ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಂತಿಮ ತೀರ್ಮಾನ ನೀಡುವವರೆಗೆ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಲು ಸೂಚಿಸಿರುವ ಹಿನ್ನೆಲೆಯಲ್ಲಿ, ಕೌನ್ಸಿಲಿಂಗ್ ನೀಡಲಾದ ಹಾಗೂ ಸಿಂಧುತ್ವ ವಿಳಂಬವಾದ ಕೆಲವು ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವುದನ್ನು ತಡೆಹಿಡಿಯಲಾಗಿದೆ.<br><br>ಮುಂದುವರೆದು, ಪ್ರಕರಣ ಈವರೆಗೆ ಬಾಕಿಯಿರುವುದರಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ಆದೇಶ ಬಂದ ನಂತರ ನಿಯಮಾನುಸಾರ ಮುಂದಿನ ಕ್ರಮವಹಿಸಲಾಗುವುದು. |
| ಉ) | ಸುಪ್ರಿಂ ಕೋರ್ಟ್‌ನಲ್ಲಿರುವ ಪ್ರಕರಣಕ್ಕೆ ಇದು ಸಂಬಂಧಿಸಿಲ್ಲದಿದ್ದರೂ ಯಾವ ಕಾರಣಕ್ಕೆ ಕೌನ್ಸಿಲಿಂಗ್‌ಗೆ ಅವಕಾಶ ನೀಡಿರುವುದಿಲ್ಲ; | |

**ಇಪಿ 59 ಪಿಎಂಎ 2024**

(**ಎಸ್. ಮಧು ಬಂಗಾರಪ್ಪ**)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು